REGD.NEWS PAPER RNI KARKAN/50347/1988
RNI.Reg.No. KA/BGW/1861/2024-2026
Licenced to post without Pre-payment
Registered Regn.No. PMG/BG/WPP-411/2024-2026
Posted at BANGALORE PSO, MYSORE ROAD, BANGALORE – 560026

Date of publication 18th of every month
Permitted to post on 20th or 21st

**ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)**



# ವಾರ್ತಾಪತ್ರ

**ಕನ್ನಡ ಮಾಸ ಪತ್ರಿಕೆ**

ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009 ದೂರವಾಣಿ : 080–22206151 – 22206152 – 22206153
Website: www.kavms.com E-mail: kavmss@gmail.com

ಸಂಪಾದಕರು:
**ರಾ.ಪ. ರವಿಶಂಕರ್**

ಕಾರ್ಯಾಲಯ ಸಮಯ { ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : 38 ಸೆಪ್ಟೆಂಬರ್ 2025 ಬೆಲೆ : 1 ರೂ. ಪುಟಗಳು : 4 ಸಂಚಿಕೆ : 09

**ರಾಜ್ಯದ ಸಮಸ್ತ ಆರ್ಯವೈಶ್ಯ ಬಂಧುಗಳಿಗೆ ನಾಡ ಹಬ್ಬ ದಸರಾ ಹಾಗೂ ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು**

**ಅಧ್ಯಕ್ಷರ ನುಡಿ**

## ಮಹಾಸಭೆ ಬೆಳೆದು ಬಂದ ದಾರಿ

### ಕಳೆದ ಸಂಚಿಕೆಯಿಂದ...

**1999ರ ಚುನಾವಣೆಗಳಲ್ಲಿ ಬೆಂಗಳೂರು ನಗರದಿಂದ ಆಯ್ಕೆ ಆಗಬೇಕಿದ್ದ 6 ಜನ ಸದಸ್ಯರಿಗೆ 24 ಜನ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು.** ಕಳೆದ ಹಲವು ವರ್ಷಗಳಿಂದ ವಿರೋದ ಪಕ್ಷದಂತೆ ಬಲವಾಗಿ ಕಾರ್ಯನಿರ್ವಹಿಸಿದ್ದ ನಾನು ಹಾಗೂ ರಾಜ್ಯಾಧ್ಯಂತ ಇದ್ದ ನನ್ನ ಹಲವಾರು ಸ್ನೇಹಿತರು ಚುನಾವಣಾ ಕಣಕ್ಕೆ ಧುಮುಕಿದೆವು. ಬೆಂಗಳೂರು ನಗರದ ಸಮಿತಿಯಿಂದ ನನ್ನನ್ನು ಹಾಗೂ ನಮ್ಮ ತಂಡವನ್ನು ದೂರವಿಡಲು ಹರಸಾಹಸವೇ ಆಯಿತು. ಚುನಾವಣೆ ರಹಿತ ಅವಿರೋದ ಆಯ್ಕೆಗೆ ಮಾಡಿದ ಯಾವುದೇ ಪ್ರಯತ್ನಗಳಿಗೂ ಪ್ರಸಕ್ತ ಕಾರ್ಯಕಾರಿ ಸಮಿತಿ ಸದಸ್ಯರು ಒಪ್ಪಲೇ ಇಲ್ಲ. ಅಂತಹ ಕ್ಲಿಷ್ಟ ಸಂದರ್ಭದಲ್ಲಿ ಮಲ್ಲೇಶ್ವರಂ ಆರ್ಯವೈಶ್ಯ ಸಂಘದ ಅಧ್ಯಕ್ಷರಾಗಿದ್ದ **ಡಾ॥ ಪಿ ಎನ್ ಗೋವಿಂದರಾಜುಲುರವರ ಮನೆಯಲ್ಲಿ ದೀರ್ಘಕಾಲ ಮಾತುಕತೆಗಳು ನಡೆದು ಅಂತಿಮವಾಗಿ ಶ್ರೀ ಎಸ್ ರಾಮಮೂರ್ತಿಯವರ ತಂಡದ ಆರು ಜನಗಳ ಪೈಕಿ ಐದು ಜನ ಮತ್ತು ನನ್ನ ತಂಡದ 18 ಜನರ ಪೈಕಿ ಒಬ್ಬರನ್ನು ತೆಗೆದುಕೊಳ್ಳಲು ಆದ ತೀರ್ಮಾನದಂತೆ ಅಂದಿನ ಕೋಶಾಧ್ಯಕ್ಷರಾಗಿದ್ದ ಶ್ರೀ ಎನ್ ಎಸ್ ಶ್ರೀನಿವಾಸಮೂರ್ತಿಯವರ ಹೃದಯ ವೈಶಾಲ್ಯತೆ ಪರಿಣಾಮ ಮತ್ತು ನನ್ನ ತಂಡದ 18 ಜನಗಳು ನೀಡಿದ ಅಮೂಲ್ಯ ಸಹಕಾರದಿಂದ ನಾನು ಮಹಾಸಭೆ ಕಾರ್ಯಕಾರಿ ಸಮಿತಿಗೆ ಪಾದಾರ್ಪಣೆ ಮಾಡಲು ಶ್ರೀವಾಸವಿ ಮಾತೆ ಅನುಗ್ರಹವಾಯಿತು.** ಇದೇ ಚುನಾವಣೆಗಳಲ್ಲಿ ಪ್ರಥಮ ಬಾರಿಗೆ ನಮ್ಮ ತಂಡದ ಹಲವಾರು ಸದಸ್ಯರು ಆಯ್ಕೆಯಾದರು. ಮುಂದಿನ ಮೂರು ವರ್ಷಗಳ ಅಧ್ಯಕ್ಷ ಚುನಾವಣೆಗಳು ಬಂದಂಹ ಸಂದರ್ಭದಲ್ಲಿ ಪುನಃ 3ನೇ ಅವಧಿಗೆ ಶ್ರೀ ಮೈಲಾಪುರ ಸುಬ್ರಮಣ್ಯಂ ಹಾಗೂ ಪ್ರತಿಸ್ಪರ್ಧಿಯಾಗಿ ಶಿವಮೊಗ್ಗದ ಶ್ರೀ ಎಸ್ ಕೆ ಶೇಷಚಲರವರು ಅಧ್ಯಕ್ಷ ಪದವಿಯ ಅಭ್ಯರ್ಥಿಗಳಾದರು. ದುರಂತವೆಂದರೇ ಅನೇಕ ಚುನಾಯಿತ ಪ್ರತಿನಿಧಿಗಳನ್ನು ಎರಡು ದಿನಗಳ ಮುನ್ನವೆ ಪ್ರವಾಸಕ್ಕೆ ಕರೆದುಕೊಂಡು ಹೋಗಿ ಸಲ್ಲದ ಅಮಿಷಗಳನ್ನು ನೀಡಿ ಚುನಾವಣೆಗಳನ್ನು ನಡೆಸಿದ್ದು ಇತಿಹಾಸ ಪುಟಗಳನ್ನು ಸೇರಿದೆ. ಇದೇ ಚುನಾವಣೆಗಳ ಸಂದರ್ಭದಲ್ಲಿ **ಶ್ರೀ ಮೈಲಾಪುರ ಸುಬ್ರಮಣ್ಯಂ ಮತ್ತು ಶ್ರೀ ತಲಂ ಶ್ರೀನಿವಾಸ ಮೂರ್ತಿಯವರ ನಡುವೆ ಅಧ್ಯಕ್ಷ ಪದವಿಗೆ ಕಾನೂನು ಬಾಹಿರವಾಗಿ ನಡೆದಿದ್ದ ಅಧಿಕಾರ ಹಂಚಿಕೆ ಕರಾರು ಒಂದು ವರ್ಷದ ನಂತರ ಮುನ್ನೆಲೆಗೆ ಬಂದಿತು.** ಆ ಸಂದರ್ಭದಲ್ಲಿ ಅಧ್ಯಕ್ಷರಾಗಿದ್ದ ಶ್ರೀ ಮೈಲಾಪುರ ಸುಬ್ರಮಣ್ಯಂರವರು ಶ್ರೀ ತಲಂ ಶ್ರೀನಿವಾಸ ಮೂರ್ತಿಯವರೊಂದಿಗೆ ಮಾಡಿಕೊಂಡಿದ್ದ ಕರಾರನ್ನು ಒಪ್ಪಿಕೊಳ್ಳದೆ ಮಹಾಸಭೆಯಲ್ಲಿ ಅಕ್ರಮ ನಡೆದಿದೆ ಎಂದು **ಐದು ಜನ ಪ್ರತಿಷ್ಠಿತ ವ್ಯಕ್ತಿಗಳ ಮೇಲೆ ಕ್ರಿಮಿನಲ್ ಮೊಕದಮ್ಮೆಯನ್ನು ಹೂಡಿ ಅವರುಗಳ ಬಂಧನಕ್ಕೆ ಆದೇಶವನ್ನು ತಂದರು.** ನಂತರ ನಡೆದ ಕಾನೂನು ಪ್ರಕ್ರಿಯೆಗಳಲ್ಲಿ ಯಾರ ಬಂಧನವು ಆಗಲಿಲ್ಲ ಆದರೆ ಮಹಾಸಭೆಯ ಪರಿಸ್ಥಿತಿ ಕುರಿತು ಹಾದಿ ಬೀದಿಯಲ್ಲಿ ಮಾತನಾಡುವಂತಾಯಿತು. ನಿರಂತರ ಒತ್ತಡಗಳ ನಂತರ 2001ರಲ್ಲಿ ಮದ್ಯಂತರ ಚುನಾವಣೆಗಳು ನಡೆದು **ತುಮಕೂರಿನ ಶ್ರೀ ಸಿ.ಎ.ಸೋಮೇಶ್ವರಗುಪ್ತರವರು ಶ್ರೀ ಮೈಲಾಪುರ ಸುಬ್ರಮಣ್ಯಂರವರ ವಿರುದ್ದ ಗೆದ್ದು ಚುನಾಯಿತ 3ನೇ ಅಧ್ಯಕ್ಷರಾಗಿ ಆಯ್ಕೆಯಾದರು.**

ಸೇವಾಕ್ಷೇತ್ರದಲ್ಲಿ ಉತ್ತಮ ಅನುಭವ ಹೊಂದಿದ್ದ ಶ್ರೀ ಸೋಮೇಶ್ವರಗುಪ್ತರವರ ಮೊದಲನೆಯ ಅಧ್ಯಕ್ಷತೆಯಾಗಿ ಸದಸ್ಯತ್ವ ಅಭಿಯಾನವನ್ನು ಕೈಗೊಂಡು ಸುಮಾರು 2 ವರ್ಷಗಳಲ್ಲಿ 15ಸಾವಿರದಷ್ಟು ಹೊಸ ಸದಸ್ಯರನ್ನು ನೋಂದಾಯಿಸಿ ಮಹಾಸಭೆಯ ಸದಸ್ಯತ್ವವನ್ನು 21,800ಕ್ಕೆ ಮುಟ್ಟಿಸಿದರು. ಜೊತೆ–ಜೊತೆಗೆ ಕ್ರಿಯಾಶೀಲ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡ ಶ್ರೀಯುತರ ಅವಧಿಯಲ್ಲಿ **ಪ್ರಪ್ರಥಮ ಆರ್ಯವೈಶ್ಯ ಕನ್ನಡ ಸಾಹಿತ್ಯ ಸಮ್ಮೇಳನ ಬೆಂಗಳೂರು ನಗರದ ಟೌನ್‌ಹಾಲ್‌ನಲ್ಲಿ** ವಿಜೃಂಭಣೆಯಿಂದ ನಡೆಯಿತು.

ಅಂತೆಯೇ ಕರ್ನಾಟಕ ಆರ್ಯವೈಶ್ಯ ಸಮಾಜದ ಸರ್ವಾಂಗೀಣ ಅಭಿವೃದ್ಧಿಗಾಗಿ, ಶ್ರೀ ಎಸ್ ಎ ವಾಸುದೇವಮೂರ್ತಿಯವರ ನೇತೃತ್ವದಲ್ಲಿ ನೀಲನಕ್ಷೆಯನ್ನು ಸಿದ್ಧಪಡಿಸಿ ಬೆಂಗಳೂರು ನಗರದ ಹೊರವಲಯದಲ್ಲಿ **250 ಎಕರೆಗಳ ಜಮೀನನ್ನು ಖರೀದಿಸಲು ಮತ್ತು ಅದರಲ್ಲಿ ಶಿಕ್ಷಣ, ಆಧ್ಯಾತ್ಮಿಕ, ಧಾರ್ಮಿಕ, ವೈದ್ಯಕೀಯ ಪರ್ಯಾಯ ಚಿಕಿತ್ಸೆಗಳ ಬಗ್ಗೆ ಸಂಶೋಧನೆ ಮತ್ತು ಅನುಷ್ಠಾನ, ಗೋಶಾಲೆ, ವೃದ್ಧಾಶ್ರಮ ಹೀಗೆ ನೂರಾರು ಹೊಸ–ಹೊಸ ಆಲೋಚನೆಗಳು, ಕಲ್ಪನೆಗಳು, ಕನಸುಗಳನ್ನು ಹೊತ್ತು ಕರ್ನಾಟಕ ಆರ್ಯವೈಶ್ಯ ಮಹಾಸಭೆ ವಿದ್ಯಾ ಸೇವಾ ಸಂಶೋಧನಾ ಪ್ರತಿಷ್ಠಾನವನ್ನು ಸ್ಥಾಪಿಸಿದರು.** ಈ ಯೋಜನೆಯನ್ನು ರಾಜ್ಯದೆಲ್ಲೆಡೆಯ ಆರ್ಯವೈಶ್ಯ ಬಂಧುಗಳಿಗೆ ತಲುಪಿಸುವ ಉದ್ದೇಶದಿಂದ ರಾಜ್ಯಮಟ್ಟದ ಸಮಾವೇಶವನ್ನು ಬೆಂಗಳೂರು ನಗರದ ಶ್ರೀ ವೈಷ್ಣವ ಸಮುದಾಯ ಭವನದಲ್ಲಿ ನಡೆಸಲಾಯಿತು. ಈ ಸಮಾವೇಶದಲ್ಲಿ ಪ್ರತಿಷ್ಠಾನಕ್ಕೆ **ಅವಶ್ಯವಿರುವ 250 ಎಕರೆ ಜಮೀನಿನ ಪೈಕಿ 187 ಎಕರೆ ಜಮೀನಿಗೆ ದಾನಿಗಳಿಂದ ವಾಗ್ದಾನವೂ** ಆಗಿದ್ದೂ ವಿಶೇಷ.



ಶ್ರೀ ಸಿ ಎ ಸೋಮೇಶ್ವರಗುಪ್ತರವರ ಕ್ರಿಯಾಶೀಲ ತೀರ್ಮಾನಗಳಿಂದ ಮಹಾಸಭೆಯ 2 ಅಂತಸ್ತುಗಳ ಉಳಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸಿ 40 ವಿದ್ಯಾರ್ಥಿಗಳ ಅವಕಾಶವಿದ್ದ ಹಾಸ್ಟೆಲ್ ವ್ಯವಸ್ಥೆಯನ್ನು 80 ವಿದ್ಯಾರ್ಥಿಗಳಿಗೆ ಮೇಲ್ದರ್ಜೆಗೆ ಏರಿಸಲಾಯಿತು. ಇದೇ ಸಂದರ್ಭದಲ್ಲಿ ಬೆಂಗಳೂರು ಆವೋಪ ಸಂಸ್ಥೆಯವರ ಕೋರಿಕೆ ಮೇರೆಗೆ ವಿದ್ಯಾರ್ಥಿಗಳಿಗಾಗಿ ಲೈಬ್ರರಿಯನ್ನು ಆರಂಭಿಸಲು ಸ್ಥಳಾವಕಾಶವನ್ನು ಮಾಡಿಕೊಡಲಾಯಿತು. ವಿನೂತನ ಕಾರ್ಯಕ್ರಮ ಎಂದರೇ ಪ್ರಪ್ರಥಮ ಬಾರಿಗೆ ಕರ್ನಾಟಕ ಆರ್ಯವೈಶ್ಯ ಸಮಾಜದ ಬಂಧುಗಳ ಅನುಕೂಲಕ್ಕಾಗಿ **ಆರ್ಯವೈಶ್ಯ ಯಲ್ಲೋ ಪೇಜ್‌ಸ್ (YELLOW PAGES)** ಬಿಡುಗಡೆ ಮಾಡಿ ಅತ್ಯುತ್ತಮ ಮಾಹಿತಿಗಳನ್ನು ಸಂಗ್ರಹಿಸಿ ಸಮಾಜಕ್ಕೆ ನೀಡಿದರು. ಇದೇರೀತಿ ಸಾಕಷ್ಟು ಕ್ರಿಯಾಶೀಲ ಕಾರ್ಯಕ್ರಮಗಳ ಮೂಲಕ ಕಾರ್ಯನಿರ್ವಹಿಸಿ 2004 ಮಾರ್ಚ್ 8ರಂದು ಚುನಾವಣೆ ನಡೆದು ಶಿವಮೊಗ್ಗ ಶ್ರೀ ಎಸ್ ಕೆ ಶೇಷಾಚಲರವರ ವಿರುದ್ಧ ಶಿವಮೊಗ್ಗದ ಶ್ರೀ ಎಂ ವಿ ಸೂರ್ಯನಾರಾಯಣರವರು ಕೇವಲ ಒಂದು ಮತದ ಅಂತರದಲ್ಲಿ ಗೆದ್ದು ನಾಲ್ಕನೇ ಚುನಾಯಿತ ಅಧ್ಯಕ್ಷರಾಗಿ ಆಯ್ಕೆಯಾದರು.

**ಶ್ರೀ ಎಂ ವಿ ಸೂರ್ಯನಾಯಣರವರ ಅವಧಿ ಆರಂಭದಿಂದಲೇ ಸಮಸ್ಯೆಗಳ ಆಗರವಾಗಿ ದ್ವೇಷ ಅಸೂಯೆಗಳ ಬೀಡಾಗಿ ಕಾರ್ಯಕಾರಿ ಸಮಿತಿ ಸಮತೋಲನವನ್ನು ಕಳೆದುಕೊಂಡಿತು.** ಇದೇ ಸಂದರ್ಭದಲ್ಲಿ 15–8–2004ರಂದು ಗುಲ್ಬರ್ಗ ನಗರದಲ್ಲಿ ನಡೆದ ಸರ್ವಸದಸ್ಯರ ಸಭೆಯಲ್ಲಿ ಏನೂ ಕಾರಣವಿಲ್ಲದೆ ನನ್ನನ್ನು ಪ್ರಾಥಮಿಕ ಸದಸ್ಯತ್ವದಿಂದಲೇ ತೆಗೆದು ಹಾಕಿದ್ದರು. ನಂತರ ಮಾನ್ಯ ನ್ಯಾಯಾಲಯದ ಆದೇಶದನ್ವಯ ಪುನಃ ಸದಸ್ಯತ್ವನ್ನು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯತ್ವನ್ನು ಉಳಿಸಿಕೊಂಡು ಇಂದು ತಮ್ಮ ಮುಂದೆ ಕಾರ್ಯನಿರ್ವಹಿಸುತ್ತಿದ್ದೇನೆ.

ಇದೇ ಅವಧಿಯಲ್ಲಿ ಮಹಾಸಭೆಯ ಮುಂದಿದ್ದ ಖಾಲಿ ಜಾಗದಲ್ಲಿ ಅಥವಾ ಪೂರ್ಣ ಜಾಗದಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಲು ತೀರ್ಮಾನ ತೆಗೆದುಕೊಂಡು ಅದಕ್ಕೆ ಪೂರಕವಾಗಿ ಉಪನಿಯಮದ ಬದಲಾವಣೆ ಸಹ ಮಾಡಲಾಯಿತು. ನಂತರ **ಜಿ ಆರ್ ಟಿ (ಉಖಖಿ) ಜುವೈಲ್ಲರ ಮತ್ತು ರೆಸಾರ್ಟ್‌ರವರಿಗೆ ಮಹಾಸಭೆಯ ಸುಮಾರು ಶೇ.65ರಷ್ಟು ಜಾಗವನ್ನು ಗುತ್ತಿಗೆಗೆ ನೀಡಲು ಕರಾರು ಮಾಡಿಕೊಳ್ಳಲಾಯಿತು. ಆದರೇ ಸದರಿ ಕರಾರಿನಲ್ಲಿದ್ದ ಅಂಶಗಳು ಮಹಾಸಭೆಯ ಕಾರ್ಯಾಚರಣೆಗೆ, ಅಭಿವೃದ್ಧಿಗೆ ಮಾರಕವಾಗುವುದಲ್ಲದೆ, ಆರ್ಥಿಕವಾಗಿಯೂ, ಲಾಭಾದಾಯಕವಾಗಿರಲಿಲ್ಲ.** ಇದರ ಜೊತೆ–ಜೊತೆಗೆ ನಿರಂತರ ಹೋರಾಟಗಳು, ಗಲಾಟೆಗಳು, ಪತ್ರ ಸಮರಗಳು ನಡೆದು ಕೊನೆಗೆ 2009 ಅಕ್ಟೋಬರ್ ತಿಂಗಳ 14ರಂದು ಕಾರ್ಯಕಾರಿ ಸಮಿತಿಗೆ ಚುನಾವಣೆಗಳು ನಡೆಯಿತು. ನಂತರ 21–10–2009ರಂದು ಅಧ್ಯಕ್ಷರ ಚುನಾವಣೆ ನಡೆದು **ಬಂಗಾರಪೇಟೆಯ ಶ್ರೀ ಎಸ್ ಎ ಪಾರ್ಥಸಾರಥಿಯವರ ವಿರುದ್ಧವಾಗಿ ಶ್ರೀ ಆರ್ ಪಿ ರವಿಶಂಕರ್‌ರವರು** ಅತ್ಯಂತ ಹೆಚ್ಚಿನ ಅಂತರದಿಂದ ಅಧ್ಯಕ್ಷರಾಗಿ ಆಯ್ಕೆಯಾದರು

**ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು,**

**–ಆರ್ ಪಿ ರವಿಶಂಕರ್**
**ಅಧ್ಯಕ್ಷರು**


ಹೆಚ್ಚಿನ ಮಾಹಿತಿಗಳಿಗಾಗಿ ಕರ್ನಾಟಕ ಆರ್ಯವೈಶ್ಯ ಮಹಾಸಭಾದ **Social Media Page** ಗಳನ್ನು **visit** ಮಾಡಿ | Karnataka Aryavysya Mahasabha

# ಅಖಿಲ ಭಾರತ ಆರ್ಯವೈಶ್ಯ ಮಹಾಸಭೆಗಳ ಒಕ್ಕೂಟ(ರಿ)

## Federation of All India Aryavysya Mahasabha's (R)

ಕರ್ನಾಟಕ ಆರ್ಯವೈಶ್ಯ ಮಹಾಸಭೆ ಘನ ಆತಿಥ್ಯದಲ್ಲಿ ದಿನಾಂಕ 17–8–2025ರ ಭಾನುವಾರ ಅಖಿಲಭಾರತ ಆರ್ಯವೈಶ್ಯ ಮಹಾಸಭಗಳ ಒಕ್ಕೂಟದ ಕಾರ್ಯಕಾರಿ ಸಮಿತಿ ಸಭೆಯನ್ನು ಕರೆಯಲಾಗಿತ್ತು. **ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಮಹಾರಾಷ್ಟ್ರ, ಕರ್ನಾಟಕ, ಒರಿಸ್ಸಾ, ಕೇರಳ** ರಾಜ್ಯಗಳಿಂದ ಆರ್ಯವೈಶ್ಯ ಮಹಾಸಭೆಯ ಎಲ್ಲಾ ಪದಾಧಿಕಾರಿಗಳು ಅಂತೆಯೇ **ಮಹಿಳಾ ಮಹಾಸಭೆ, ಯುವಜನ ಮಹಾಸಭೆಯ** ಪದಾಧಿಕಾರಿಗಳು ಸಹ ಈ ಸಭೆಯಲ್ಲಿ ಉಪಸ್ಥಿತರಿದ್ದು ಸಭೆಯ ಕಾರ್ಯಕಲಾಪಗಳಿಗೆ ಹೊಸತನವನ್ನು ತಂದರು.

ರಾಜ್ಯ–ರಾಜ್ಯಗಳ ನಡುವೆ ಸಮರ್ಪಕ ಹೊಂದಾಣಿಕೆಗಳೊಂದಿಗೆ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಎಲ್ಲಾ ರಾಜ್ಯಗಳ ಮಹಾಸಭೆಗಳು ಒಂದಾಗಬೇಕು, **ಸಮಾಜದಲ್ಲಿರುವ ಹಲವಾರು ಸಮಸ್ಯೆಗಳ ಪರಿಹಾರಕ್ಕೆ ಜಂಟಿಯಾಗಿ ಕಾರ್ಯನಿರ್ವಹಿಸಬೇಕು,** ತಮ್ಮೂಲಕ ಸಮಾಜದ ಸಂಘಟನೆ ಸದೃಡವಾಗಿ ಸಮಸ್ಯೆ ಮುಕ್ತ ಸಮಾಜ ನಿರ್ಮಾಣಕ್ಕೆ ಕಂಕಣಬದ್ದರಾಗಿ ಕಾರ್ಯನಿರ್ವಹಿಸಬೇಕೆಂದು ತೀರ್ಮಾನಿಸಲಾಯಿತು.



ಎಲ್ಲಾ ರಾಜ್ಯಗಳ ಮಹಾಸಭೆಯ ಪದಾಧಿಕಾರಿಗಳು

**ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಆಶಯದಂತೆ 2026 ರ 24 ಡಿಸೆಂಬರ್ ರಿಂದ 27 ಡಿಸೆಂಬರ್ ರವರೆಗೆ ಬೆಂಗಳೂರು ನಗರದಲ್ಲಿ ನಡೆಸಲು ಉದ್ದೇಶಿರುವ ವಿಶ್ವ ಆರ್ಯವೈಶ್ಯ ಸಮಾವೇಶದ ಬಗ್ಗೆ ಶ್ರೀ ಅನಿಲ್ ಕುಮಾರ್ ತಲಂರವರು ಅತ್ಯುತ್ತಮವಾದ ಮಾಹಿತಿಯನ್ನು ನೀಡಿದ ನಂತರ ಸಭೆಯು ವಿಶ್ವ ಆರ್ಯವೈಶ್ಯ ಸಮಾವೇಶಕ್ಕೆ ಎಲ್ಲಾ ರಾಜ್ಯಗಳಿಂದಲೂ ಅವಶ್ಯಕ ಸಹಕಾರ ನೀಡುವುದಾಗಿ ಅತ್ಯಂತ ಅಭಿಮಾನದಿಂದ ಭರವಸೆ ನೀಡಿದರು.**

ಮುಂದಿನ 3 ವರ್ಷಗಳ ಅವಧಿಗೆ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಮಾಡುವ ವಿಚಾರದಲ್ಲಿ ಸಭಾಧ್ಯಕ್ಷರಾಗಿದ್ದ ತೆಲಂಗಾಣ ಆರ್ಯವೈಶ್ಯ ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಮರವಾಡಿ ಲಕ್ಷ್ಮೀನಾರಾಯಣರವರು ಮಾತನಾಡಿ ಇತರ ರಾಜ್ಯಗಳ ಕಾರ್ಯಕ್ರಮಗಳಿಗೆ ಹೋಲಿಸಿದಲ್ಲಿ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಕಾರ್ಯಕ್ರಮಗಳು ಮಹತ್ತರವಾಗಿ ಸಾಗಿದೆ, ಇಷ್ಟೇ ಅಲ್ಲದೆ ಮುಂಬರುವ ಡಿಸೆಂಬರ್‌ನಲ್ಲಿ ನಡೆಯಲಿರುವ ವಿಶ್ವ ಆರ್ಯವೈಶ್ಯ ಸಮಾವೇಶವು ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿರುವ ಕಾರಣ ಮತ್ತು ಇಲ್ಲಿನ ತಂಡವು ಅತ್ಯಂತ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿವುದರಿಂದ ಮುಂದಿನ ಅವಧಿಗೆ ಶ್ರೀ ಆರ್ ಪಿ ರವಿಶಂಕರ್‌ರವರನ್ನೇ ಅಧ್ಯಕ್ಷರನ್ನಾಗಿ ಮಾಡಬೇಕೆಂದು ನೀಡಿದ ಸಲಹೆಯನ್ನು ಸಭೆ ಸರ್ವಾನುಮತದಿಂದ ಸ್ವಾಗತಿಸಿತು. ಇದರೊಂದಿಗೆ 7 ವರ್ಷಗಳ ನಂತರ 2ನೇ ಅವಧಿಗೆ ನಮ್ಮ ಮಹಾಸಭೆಯ ಅಧ್ಯಕ್ಷರನ್ನು **ಒಕ್ಕೂಟದ ರಾಷ್ಟ್ರಾಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿದ** ನಂತರ ಇತರ ರಾಜ್ಯದ ಪ್ರತಿನಿಧಿಗಳು ಅಭಿನಂದಿಸಿ ಶುಭ ಹಾರೈಸಿದರು. ಒಟ್ಟಾರೆ ಸಭೆಯ ಕಾರ್ಯಕಲಾಪಗಳು ಪ್ರಗತಿದಾಯಕವಾಗಿತ್ತು.



ತುರ್ತಾಗಿ ಗಮನಿಸಿ

## ಕರ್ನಾಟಕ ಆರ್ಯವೈಶ್ಯ ಮಹಾಸಭೆ

ನಂ.16 ಶೇಷಾದ್ರಿ ರಸ್ತೆ ಗಾಂಧೀನಗರ, ಬೆಂಗಳೂರು–09

ತಪ್ಪದೇ ಓದಿ

### ಘನ ಸರ್ಕಾರದ ಜನಗಣತಿ

ಕರ್ನಾಟಕ ರಾಜ್ಯ ಸರ್ಕಾರದಿಂದ ಇದೆ ತಿಂಗಳು 22 ರಿಂದ ಜನಗಣತಿ ಕಾರ್ಯನಡೆಯುತ್ತಿದೆ. ಜನಗಣತಿಗಾಗಿ ನಮ್ಮ ಸಮಾಜ ಬಂಧುಗಳ ಮನೆಗೆ ಬಂದಾಗ, ದಯವಿಟ್ಟು ಸರಿಯಾದ, ಸ್ಪಷ್ಟವಾದ ಮಾಹಿತಿಗಳನ್ನು ನೀಡಿ.

**ಧರ್ಮ: ಹಿಂದೂ    ಜಾತಿ : ಆರ್ಯವೈಶ್ಯ ಎಂದು ಮಾತ್ರ ನಮೂದಿಸಿ    ಉಪಪಂಗಡ : ಏನೂ ಇಲ್ಲ**

ನಮ್ಮ ಆರ್ಯವೈಶ್ಯ ಯುವಕರು ಅಂತರಜಾತಿ/ಅಂತರ ಧರ್ಮದ ಹೆಣ್ಣುಮಕ್ಕಳನ್ನು ಮದುವೆ ಆಗಿದ್ದರೆ, ಆಕೆಗೆ ಕೂಡ ಆರ್ಯವೈಶ್ಯ ಎಂದೇ ಬರೆಸಿ. ಶೆಟ್ಟಿ/ವೈಶ್ಯ/ಕೋಮಟಿ ಎಂದಲ್ಲಾ ದಯವಿಟ್ಟು ಬರೆಸಬೇಡಿ, ಮುಂದೆ ತಮ್ಮ ಮಕ್ಕಳ ಭವಿಷ್ಯಕ್ಕೆ ತೊಂದರೆ ಆಗುತ್ತದೆ.

**ನೀವು ಓದಿ, ನಿಮ್ಮ ಕುಟುಂಬ ಹಾಗೂ ಬಂಧುಗಳಿಗೆ ತಿಳಿಸಲು ಮರೆಯದಿರಿ**

# ಚಾಮರಾಜನಗರ ಜಿಲ್ಲಾ ಸಮಾವೇಶ

ದಿನಾಂಕ 7–9–2025ರ ಭಾನುವಾರ ಕೊಳ್ಳೆಗಾಲದ ವಾಸವಿ ಕಲ್ಯಾಣ ಮಂಟಪದಲ್ಲಿ ಚಾಮರಾಜನಗರ ಜಿಲ್ಲಾ ಸಮಾವೇಶವನ್ನು ಆರ್ಯವೈಶ್ಯ ಮಂಡಳಿ ಕೊಳ್ಳೇಗಾಲ ಇವರ ಆತಿಥ್ಯದಲ್ಲಿ ಅತ್ಯಂತ ಶಿಸ್ತುಬದ್ಧವಾಗಿ ನಡೆಸಲಾಯಿತು.

ಚಾಮರಾಜನಗರ ಜಿಲ್ಲಾ ಸಮಾವೇಶಕ್ಕೆ ಆಗಮಿಸಿದ್ದ ಮಹಾಸಭೆಯ ಅಧ್ಯಕ್ಷರಿಗೆ ಗೌರವಪೂರ್ವಕ ಸ್ವಾಗತ ನೀಡಲಾಯಿತು. ಶ್ರೀ ಕನ್ಯಕಾಪರಮೇಶ್ವರಿ ದೇವಾಲಯದಿಂದ ಮೆರವಣಿಗೆಯಲ್ಲಿ ಅಧ್ಯಕ್ಷರುನ್ನು ಸಭಾಂಗಣಕ್ಕೆ ಕರೆತರಲಾಯಿತು ಆತಿದೇಯ ಸಂಘದ ಅಧ್ಯಕ್ಷರಾದ ಶ್ರೀ ಕುಮಾರಕೃಷ್ಣರವರು ಸಭೆಗೆ ಸ್ವಾಗತಕೋರಿದರು. ಜಿಲ್ಲಾಧ್ಯಕ್ಷರು ಹಾಗೂ ಸಭಾಧ್ಯಕ್ಷರಾದ ಶ್ರೀ ಬಿ ಕೆ ಪ್ರಕಾಶ್‌ರವರು ಕಾರ್ಯಕ್ರಮದ ಉದ್ಧೇಶವನ್ನು ಸಭೆಗೆ ತಿಳಿಸಿದರು.


ಚಾಮರಾಜನಗರ ಜಿಲ್ಲಾ ಸಮಾವೇಶವನ್ನು ಉದ್ಘಾಟಿಸುತ್ತಿರುವ ಮಹಾಸಭೆ ಅಧ್ಯಕ್ಷರು ಹಾಗೂ ಇತರರು

ವಿಶ್ವ ಆರ್ಯವೈಶ್ಯ ಸಮಾವೇಶದ ಬಗ್ಗೆ ತಲಂ ಅನಿಲ್‌ರವರು ಮಾತನಾಡಿ ಮಾಹಿತಿಗಳನ್ನು ನೀಡಿದರು. ನಂತರ ಮಾನ್ಯ ಅಧ್ಯಕ್ಷರು ಮಹಾಸಭೆಯ ಕಾರ್ಯ ಯೋಜನೆ, ಕಾರ್ಯಕ್ರಮಗಳ ಬಗ್ಗೆ ಸವಿವರವಾದ ಮಾಹಿತಿಗಳನ್ನು ನೀಡಿದರು ಸಭೆಯ ಕಾರ್ಯಕಲಾಪಗಳ ನಂತರ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಸಂಘ–ಸಂಸ್ಥೆಗಳು ಮಹಾಸಭೆ ಅಧ್ಯಕ್ಷರನ್ನು ಅಭಿನಂದಿಸಿ ಗೌರವಿಸಿದರು.

# ಕರ್ನಾಟಕದ ಆರ್ಯವೈಶ್ಯ ವಿದ್ಯಾರ್ಥಿಗಳಿಗೆ 2025-26ರ ಸಾಲಿನ ವಿಶೇಷ ಯೋಜನೆ

ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳ ಆಶಾಕಿರಣ

## ಆರ್ಯವೈಶ್ಯ ವಿದ್ಯಾರ್ಥಿಮಿತ್ರ

LAST DATE FOR APPLICATION 30–11–2025

> ನೀವು ಪ್ರತಿಭಾವಂತ ವಿದ್ಯಾರ್ಥಿಗಳೇ? > ನಿಮಗೆ ವೃತ್ತಿಪರ ಕೋರ್ಸ್ ಮಾಡಲು ಆರ್ಥಿಕವಾಗಿ ಸಮಸ್ಯೆ ಇದೆಯೇ? > ಬ್ಯಾಂಕುಗಳಿಂದ ಶಿಕ್ಷಣ ಸಾಲ ಪಡೆಯಲು ಆಗಲಿಲ್ಲವೇ?

### ನಿಮ್ಮ ಶಿಕ್ಷಣ ಮುಂದುವರಿಸಲು ನಿಮಗೆ ಸಹಾಯ ನೀಡಲು ನಿಮ್ಮ ಜೊತೆಗಿದೆ- ನಿಮ್ಮ ಮಹಾಸಭೆ

ಬಡತನದಲ್ಲಿ ಹುಟ್ಟುವುದು ನಮ್ಮ ತಪ್ಪಲ್ಲ–ಆದರೆ ಬಡತನದಲ್ಲಿಯೇ ಸಾಯುವುದು ಮಾತ್ರ ನಮ್ಮ ತಪ್ಪು, ಬಡತನ ನಮ್ಮ ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಶಾಪವಾಗಬಾರದು, ಪ್ರತಿಭೆಗಳು ಸೊರಗಲೂಬಾರದು. ಮನೆಯಲ್ಲಿ ಒಬ್ಬರು ವಿದ್ಯಾವಂತರಾದರೆ, ಅವರ ಮೂಲಕ ಕುಟುಂಬವೇ ಆರ್ಥಿಕವಾಗಿ ಸದೃಢವಾಗಬೇಕೆಂಬ ಉನ್ನತ ಧ್ಯೇಯೋದ್ದೇಶಗಳೊಂದಿಗೆ ಕರ್ನಾಟಕ ಆರ್ಯವೈಶ್ಯ ಮಹಾಸಭಾ ಸಮಾಜದ ಆರ್ಥಿಕವಾಗಿ ತೊಂದರೆಯಲ್ಲಿರುವ ವೃತ್ತಿಪರ ಕೋರ್ಸುಗಳಲ್ಲಿ ಅಂದರೆ, ಇಂಜಿನಿಯರಿಂಗ್, ವೈದ್ಯಕೀಯ, ಕಾನೂನು ಕೋರ್ಸುಗಳಲ್ಲಿ ಈಗಾಗಲೇ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ಬಡ ಆರ್ಯವೈಶ್ಯ ವಿದ್ಯಾರ್ಥಿಗಳಿಗೆ ಕೋರ್ಸ್ ಆರಂಭದಿಂದ ಕೊನೆಯವರೆವಿಗೂ ಕಾಲೇಜಿಗೆ ಪಾವತಿ ಮಾಡಬೇಕಿರುವ ಪೂರ್ಣ ಫೀ ಹಣವನ್ನು ಅಥವಾ ಗರಿಷ್ಠ 1,00,000–00(ಒಂದು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಬಡ್ಡಿ ರಹಿತ ಸಾಲದ ರೂಪದಲ್ಲಿ ಮಹಾಸಭೆಯ ಷರತ್ತುಗಳನ್ವಯ ಕೊಡಿಸಲಾಗುತ್ತದೆ.

### ಅರ್ಹತೆಗಳು

- ಫಲಾನುಭವಿ ವಿದ್ಯಾರ್ಥಿ ಅಥವಾ ಪೋಷಕರು ಕಡ್ಡಾಯವಾಗಿ ಮಹಾಸಭೆಯ ಸದಸ್ಯರಾಗಿರಬೇಕು.
- ಯಾವುದೇ ಬೇರೆ ಸಂಘ/ಸಂಸ್ಥೆಗಳಿಂದ/ಬ್ಯಾಂಕುಗಳಿಂದ, ಯಾವುದೇ ರೀತಿಯ ವಂತಿಗೆ/ಸಾಲ ಪಡೆದುಕೊಂಡಿರಬಾರದು.
- ಸರ್ಕಾರದ ಕೋಟಾದಡಿ ಸೀಟು ಪಡೆದಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾತ್ರ ಈ ಯೋಜನೆ ಅನ್ವಯವಾಗುತ್ತದೆ.
- ಪ್ರತೀ ಅರೆ/ವಾರ್ಷಿಕ ಪರೀಕ್ಷೆಗಳಲ್ಲಿ ಕನಿಷ್ಟ ಪ್ರಥಮ ದರ್ಜೆಯಲ್ಲಿ (FIRST CLASS) ಉತ್ತೀರ್ಣರಾಗಿರಬೇಕು. ತಪ್ಪಿದಲ್ಲಿ ಸೌಲಭ್ಯವನ್ನು ನಿಲ್ಲಿಸಲಾಗುತ್ತದೆ.
- ಕರ್ನಾಟಕ ರಾಜ್ಯದಲ್ಲಿಯೇ ಎರಡನೇ ಪಿ.ಯು.ಸಿ ವರೆವಿಗೂ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಮಾತ್ರ ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಅವಕಾಶವಿದೆ.
- ಸಹಕಾರ ಸಂಘಗಳ ಮೂಲಕ ಬಡ್ಡಿರಹಿತ ಸಾಲ ಸೌಲಭ್ಯ ಮಾಡಿಕೊಡಲಾಗುತ್ತದೆ.
- ವಿದ್ಯಾರ್ಥಿಗಳ ಕೋರ್ಸು ಮುಗಿದ 6 ತಿಂಗಳ ನಂತರ ಗರಿಷ್ಠ 36 ತಿಂಗಳ ಒಳಗಾಗಿ ಸಾಲದ ಮೊತ್ತವನ್ನು ಕಂತುಗಳಲ್ಲಿ ಪೂರ್ಣವಾಗಿ ಪಾವತಿ ಮಾಡಬೇಕಾಗುತ್ತದೆ.
- ಸ್ಥಳೀಯ ಆರ್ಯವೈಶ್ಯ ಸಂಘಗಳ/ಮಹಾಸಭಾ ನಿರ್ದೇಶಕರ ಅನುಮತಿ ಪತ್ರ ಕಡ್ಡಾಯ.
- ಈ ಯೋಜನೆಯಲ್ಲಿ ಸಹಕಾರ ಕೋರಿ ಮಹಾಸಭೆಗೆ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ, ಅರ್ಜಿಗಳನ್ನು ಊರ್ಜಿತ/ಅನೂರ್ಜಿತಗೊಳಿಸುವ ಪೂರ್ಣ ಅಧಿಕಾರವು ಕರ್ನಾಟಕ ಆರ್ಯವೈಶ್ಯ ಮಹಾಸಭೆಗೆ ಇರುತ್ತದೆ ಮತ್ತು ಯಾವುದೇ ಸಂದರ್ಭದಲ್ಲಿ ಮಹಾಸಭೆಯ ಯೋಜನೆಯನ್ನು ಹಿಂಪಡೆಯುವ ಅಧಿಕಾರವನ್ನು ಮಹಾಸಭೆ ಹೊಂದಿರುತ್ತದೆ.
- ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಅಧಿಕೃತ ವೆಬ್‌ಸೈಟ್ www.kavms.com ಮೂಲಕ online ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 30–11–2025
- ಹೊರದೇಶದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.
- ಯಾವುದೇ ವಿಶ್ವವಿದ್ಯಾನಿಲಯದಿಂದ ಅಂಗೀಕೃತ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
- ಒಂದು ಕುಟುಂಬದ ಇಬ್ಬರು ವಿದ್ಯಾರ್ಥಿಗಳು ಏಕಕಾಲದಲ್ಲಿ ಯೋಜನೆಯಲ್ಲಿ ಪಾಲ್ಗೊಳ್ಳಲು ಅವಕಾಶವಿರುವುದಿಲ್ಲ.
- ಯೋಜನೆಗೆ ಸಂಭಂದಿಸಿದ ನಿಯಮ/ನಿಬಂಧನೆಗಳನ್ನು ಆಗಿಂದ್ದಾಗ್ಗೆ ಪರಿಷ್ಕರಿಸುವ ಅಧಿಕಾರ ಮಹಾಸಭೆಗೆ ಇರುತ್ತದೆ.
- ಯಾವುದೇ ವಿದ್ಯಾರ್ಥಿಗಳು/ಪೋಷಕರು ತಪ್ಪು ಮಾಹಿತಿಗಳನ್ನು ನೀಡಿ ಈ ಯೋಜನೆಯಿಂದ ಸೌಲಭ್ಯ ಪಡೆದಿದ್ದಾರೆ ಎಂದು ತಿಳಿದು ಬಂದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ನೀಡಿರುವ ಸಾಲದ ಮೊತ್ತವನ್ನು ಬ್ಯಾಂಕ್ ಅಥವಾ ಸಹಕಾರ ಸಂಘದ ಬಡ್ಡಿಯೊಂದಿಗೆ ಕೂಡಲೇ ವಾಪಸ್ಸು ಪಡೆಯಲಾಗುತ್ತದೆ ಮತ್ತು ಅಂತಹ ವಿದ್ಯಾರ್ಥಿಗಳ ಮತ್ತು ಪೋಷಕರ ಹೆಸರು ಮತ್ತು ಫೋಟೊವನ್ನು ಮಹಾಸಭೆಯ ವಾರ್ತಾಪತ್ರದಲ್ಲಿ ಪ್ರಕಟಿಸಲಾಗುತ್ತದೆ.

Scan below QR code to open the Application form

KAVMS

### ವಿಶೇಷ ಸೂಚನೆ :

★ ಒಬ್ಬ ವಿದ್ಯಾರ್ಥಿ/ ಒಂದು ಮನೆಗೆ ಮಹಾಸಭೆಯಿಂದ ಒಂದು ರೀತಿಯ ಅನುಕೂಲವನ್ನು ಪಡೆದುಕೊಳ್ಳಲು ಅವಕಾಶವನ್ನು ಮಾಡಿಕೊಡಲಾಗಿದೆ. ಅವುಗಳೆಂದರೆ ಲ್ಯಾಪ್‌ಟಾಪ್/ ವಿದ್ಯಾರ್ಥಿಮಿತ್ರ ಸಾಲ ಯೋಜನೆ/ ಹಾಸ್ಟೆಲ್‌ನಲ್ಲಿ ಉಚಿತ ಸೀಟ್

★ ನೇರವಾಗಿ ಬಂದ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ.

★ ಯಾವುದೇ ಒಂದು ಕುಟುಂಬದಿಂದ ಮಹಾಸಭೆಯ ಯಾವುದಾದರು ಒಂದು ಯೋಜನೆಯ ಸಹಾಯವನ್ನು ಪಡೆದುಕೊಳ್ಳಲು ಅವಕಾಶವಿರುತ್ತದೆ ಈಗಾಗಲೇ ಆ ಕುಟುಂಬದಿಂದ ಯಾವುದೇ ರೀತಿಯ ಸಹಾಯ ಪಡೆದುಕೊಂಡಿದ್ದರು ಇಂದಿನ ಅರ್ಜಿಯನ್ನು ಅನುರ್ಜಿತ ಗೊಳಿಸಲಾಗುತ್ತದೆ (ಪ್ರತಿಭಾ ಪುರಸ್ಕಾರ ಹೊರೆತುಪಡಿಸಿ)

## ಲ್ಯಾಪ್‌ಟಾಪ್ ಯೋಜನೆ

LAST DATE FOR APPLICATION 30–11–2025

### ಉನ್ನತ ಶಿಕ್ಷಣದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾತ್ರ

ವೃತ್ತಿಪರ ಕೋರ್ಸ್‌ಗಳಲ್ಲಿ (PROFESSIONAL COURSE) ಅಂದರೇ ಎಂ.ಸಿ.ಎ (M C A), ಬಿ.ಸಿ.ಎ (B C A) ಎಂ.ಎಸ್ಸಿ ಕಂಪ್ಯೂಟರ್ ( M Sc COMPUTER SCINCE), ಬಿ.ಎಸ್ಸಿ ಕಂಪ್ಯೂಟರ್ (B Sc COMPUTER SCIENCE), ಡಿಪ್ಲೋಮಾ ಇನ್ ಕಂಪ್ಯೂಟರ್ ( DIPLOMA IN COMPUTERS), ಬಿ.ಇ (BE), ಎಂ.ಟೆಕ್ (M TECH), ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತರು ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಕಾಲೇಜು ವಿದ್ಯಾರ್ಥಿಗಳ ಶಿಕ್ಷಣದ ಅನುಕೂಲಕ್ಕಾಗಿ ಮಹಾಸಭೆಯ ನಿಬಂಧನೆಗಳನ್ವಯ ಲ್ಯಾಪ್‌ಟಾಪ್‌ಗಳನ್ನು ನೀಡುವ ವಿನೂತನ ಯೋಜನೆಯನ್ನು ಪರಿಚಯಿಸುತ್ತಿದೆ.

### ಈ ಯೋಜನೆಯ ಪ್ರಯೋಜನ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು



- ಫಲಾನುಭವಿ ವಿದ್ಯಾರ್ಥಿ ಅಥವಾ ಪೋಷಕರು ಕಡ್ಡಾಯವಾಗಿ ಮಹಾಸಭೆಯ ಸದಸ್ಯರಾಗಿರಬೇಕು.
- ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಗಳಾಗಿರಬೇಕು.
- ಕರ್ನಾಟಕದ ಯಾವುದೇ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಾಗಿರಬೇಕು.
- ಹಿಂದಿನ ಪರೀಕ್ಷೆಯಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳಿಸಿರಬೇಕು.
- ಸ್ಥಳೀಯ ಆರ್ಯವೈಶ್ಯ ಸಂಘ/ಸದರಿ ಜಿಲ್ಲೆಯ ಮಹಾಸಭೆ ಕಾರ್ಯಕಾರಿ ಸಮಿತಿ ಸದಸ್ಯರು/ಜಿಲ್ಲಾ ಸಮಿತಿ ಅಧ್ಯಕ್ಷ/ಕಾರ್ಯದರ್ಶಿಗಳ ಧೃಡೀಕರಣವನ್ನು ನೀಡಬೇಕಿರುವುದು ಕಡ್ಡಾಯವಾಗಿರುತ್ತದೆ.
- ಯಾವುದೇ ಕಾರಣ ನೀಡದೆ ಅರ್ಜಿಗಳನ್ನು ಪುರಸ್ಕರಿಸುವ–ತಿರಸ್ಕರಿಸುವ ಅಧಿಕಾರ ಕರ್ನಾಟಕ ಆರ್ಯವೈಶ್ಯ ಮಹಾಸಭೆಯದ್ದಾಗಿರುತ್ತದೆ.
- ಲ್ಯಾಪ್‌ಟಾಪ್ ಪಡೆಯಲು ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ, ಕೊಡಮಾಡಲಿರುವ ಲ್ಯಾಪ್‌ಟಾಪ್ ಮಾಡೆಲ್ ಬಗ್ಗೆ ತಿಳಿಸಲಾಗುತ್ತದೆ.
- ಅಂತಿಮ ವರ್ಷ ( ಫೈನಲ್ ಇಯರ್, ಫೈನಲ್ 2 ಸೆಮಿಸ್ಟರ್ )ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ

Scan below QR code to open the Application form

KAVMS

ಅರ್ಜಿಗಳನ್ನು online ನಲ್ಲಿ ಭರ್ತಿ ಮಾಡಲು ಮಾತ್ರ ಅವಕಾಶವಿರುತ್ತದೆ. ಅರ್ಜಿಗಳಿಗಾಗಿ www.kavms.com ಸಂಪರ್ಕಿಸಿ

Application
Last date
15th October
2025

# ಬೆಂಗಳೂರು ನಗರದ ಅರಮನೆ ಮೈದಾನದಲ್ಲಿ

**ದಿನಾಂಕ 16 ನವೆಂಬರ್ 2025ರ ಭಾನುವಾರ ಬೆಳಿಗ್ಗೆ**

## ರಾಜ್ಯ ಮಟ್ಟದ 15ನೇ ಪ್ರತಿಭೋತ್ಸವ-2025

**ಕರ್ನಾಟಕ ರಾಜ್ಯ ಆರ್ಯವೈಶ್ಯ ಪ್ರತಿಭಾವಂತ ವಿದ್ಯಾರ್ಥಿಗಳಿಂದ**

## ಅರ್ಜಿ ಆಹ್ವಾನ – ಆನ್‌ಲೈನ್‌ನಲ್ಲಿ

KAVMS
SCAN QR CODE
FOR APPLICATION

ಆತ್ಮೀಯ ಕುಲಬಾಂಧವರೇ,
2024–25ನೇ ಶೈಕ್ಷಣಿಕ ವರ್ಷದ ಪರೀಕ್ಷೆಗಳಲ್ಲಿ ಎಸ್‌ಎಸ್‌ಎಲ್‌ಸಿ, 2ನೇ ಪಿಯುಸಿ, ಡಿಗ್ರಿ ಹಾಗು ಉನ್ನತ ಪರಿಕ್ಷೆಗಳಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ಸಮಾಜದ ಕೀರ್ತಿಯನ್ನು ಬೆಳಗಿರುವ ಸಮಸ್ತ ವಿದ್ಯಾ ಮಾಣಿಕ್ಯಗಳನ್ನು ಅಭಿನಂದಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಅರ್ಜಿಗಳನ್ನು ಕಳುಹಿಸಲು ಕೊನೆಯ ದಿನಾಂಕ – 15.10.2025**

ಅರ್ಜಿಗಳನ್ನು ಪಡೆಯಲು **www.kavms.com** ಭೇಟಿ ಮಾಡಿ

---

suvarna news
ಕನ್ನಡಪ್ರಭ

## ಕರ್ನಾಟಕ ಆರ್ಯವೈಶ್ಯ ಮಹಾಸಭಾ(ರಿ)

## ರಾಜ್ಯ ಮಟ್ಟದ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ಹೆಚ್ಚಿನ ವಿವರಗಳಿಗಾಗಿ
Qr Code ಸ್ಕ್ಯಾನ್ ಮಾಡಿ

ಅರ್ಜಿ ಸಲ್ಲಿಸಲು
ಕೊನೆಯ ದಿನಾಂಕ:
15.10.2025

## ವಾಸವಿ ಎಕ್ಸಲೆನ್ಸ್ ಅವಾರ್ಡ್ಸ್-2025

**ಬೆಂಗಳೂರು ನಗರದ ಅರಮನೆ ಮೈದಾನದಲ್ಲಿ**

**ದಿನಾಂಕ 16 ನವೆಂಬರ್ 2025ರ ಭಾನುವಾರ ಸಂಜೆ**

KAVMS

---


ADTV

# ELEGANT TOURS

ELEGANT TOURS
First Floor, No 44, South End Road, Above Axis Bank,
Opp Bharathi Nursing Home, Bengaluru - 560 004

## ಅತೀಂದ್ರಿಯ ಕಾಶಿ ಯಾತ್ರೆ
(5ರಾತ್ರಿಗಳು – 6ದಿನಗಳು)

**ಕೆಳಕಂಡವು ಒಳಗೊಂಡಿರುತ್ತದೆ**
- ಬೆಂಗಳೂರಿನಿಂದ ಹೋಗಲು ಮತ್ತು ಬರಲು ವಿಮಾನ ದರ
- ಎ/ಸಿ ಡೀಲಕ್ಸ್ ರೂಮ್‌ಗಳು (ಇಬ್ಬರಿಗೆ 1 ರೂಮ್)
- ದಿನಕ್ಕೆ 3 ಬಾರಿ ಸಸ್ಯಹಾರಿ ಊಟ ನಮ್ಮದೇ ಅಡುಗೆಯವರಿಂದ
- ಎ/ಸಿ ಡೀಲಕ್ಸ್ ಬಸ್ 2X2
- ಎಲ್ಲಾ ಸ್ಥಳಗಳಲ್ಲಿ ಶ್ರಾದ್ಧ ಮಾಡಲು ಅವಕಾಶ

ಪ್ರತೀ ವಾರವೂ ಪ್ರವಾಸ ಇರುತ್ತದೆ.

ಒಬ್ಬರಿಗೆ **Rs. 42000/-** ವಿಮಾನ ದರ ಸಹಿತ

**ಹೋಗುವ ಸ್ಥಳಗಳು**
- ಅಯೋಧ್ಯ
- ಪ್ರಯಾಗ್‌ರಾಜ್
- ಕಾಶಿ
- ಗಯ
- ಬೋಧ್‌ಗಯಾ

**ನೈಮಿಷಾರಣ್ಯ ಪ್ರವಾಸ ಬೇಕಾದಲ್ಲಿ 1 ದಿನ ಹೆಚ್ಚುವರಿ ರೂ.3500/- ಪಾವತಿಸಬೇಕಾಗುತ್ತದೆ.**

## ಪುರಿ ಜಗನ್ನಾಥ್ – ಭುವನೇಶ್ವರ್
(3ರಾತ್ರಿಗಳು – 4ದಿನಗಳು)

ಒಬ್ಬರಿಗೆ **35,999/-** ವಿಮಾನ ದರ ಸಹಿತ

ಹೋಗುವ ಸ್ಥಳಗಳು : ದೌಲಿ ಪೀಸ್ ಪಗೋಡ, ಕೊನಾರ್ಕ್ ಸನ್ ಟೆಂಪಲ್, ಚಂದ್ರಭಾಗ್ ಬೀಚ್
ಜಗನ್ನಾಥ್ ಟೆಂಪಲ್, ವಿಮಲಾ ಟೆಂಪಲ್, ಚಿಲ್ಕ ಲೇಕ್, ಅಲಾರ್‌ನಾಥ್ ಟೆಂಪಲ್
ತಾರಾ ತರಿಂಗಿಣಿ ಶಕ್ತಿ ಪೀಠ, ಲಿಂಗರಾಜ್ ಟೆಂಪಲ್, ಮುಕ್ತೇಶ್ವರ್ ಟೆಂಪಲ್, ಕಂದಗಿರಿ – ಉದಯಗಿರಿ ಕೇವ್ಸ್

## RAMESWARAM YATRA
5 Nights / 6 Days

**Places : Guruvayur | Trishur | Kaladi | Trivendrum | Suchindram
Kanyakumari | Madurai | Rameswaram | Thanjavur | Trichy**

Per Head **20,999/-**





**Package Includes :** 3 Times Tasty Food from Bengaluru Cook ❖ Luxury AC Bus for intermediate travel ❖ Double Sharing AC Rooms + Lift ❖ Air Travel ❖ Support staff to help elders with luggage

For more Information/Reservation
Please Contact this Numbers **Manoj : 90358 05575**


2026ರ ಮಾರ್ಚ್ ತಿಂಗಳಲ್ಲಿ ಜಪಾನ್ ದೇಶದ ಪ್ರವಾಸವನ್ನು
ಮಹಾಸಭೆ ನೇತೃತ್ವದಲ್ಲಿ ಅನುಭವಿ ಪ್ರವಾಸಿ ಸಂಸ್ಥೆಯೊಂದಿಗೆ ಅಯೋಜಿಸಿರುತ್ತೇವೆ.

## CHERRY BLOSSOM TOUR

TOUR INFINITY

**ಜಪಾನ್ ದೇಶದ ಪ್ರವಾಸದ ಮಾಹಿತಿ**

| | | |
|---|---|---|
| ಪ್ರವಾಸ ಸಮಯ | – | 2026ರ ಮಾರ್ಚ್ |
| ಪ್ರವಾಸದ ಅವಧಿ | – | 8 (ಎಂಟು) ದಿನಗಳು |
| ಪ್ರವಾಸದ ಆರಂಭ | – | ಬೆಂಗಳೂರು ನಗರ |
| ಪ್ರವಾಸ ಶುಲ್ಕ | – | ಒಬ್ಬರಿಗೆ ಸುಮಾರು ರೂ.2,80,000–00 (ಸಾಂದರ್ಭಿಕ ಏರಿಳಿತಗಳಿಗೆ ಒಳಪಟ್ಟಿದೆ) |

**ಭಾರತ–ಜಪಾನ್ ದೇಶಗಳ ಪ್ರವಾಸ ನಿಯಮಗಳು/ಷರತ್ತುಗಳಿಗೆ ಒಳಪಟ್ಟು ಸೀಟುಗಳನ್ನು ಕಾದಿರಿಸಲಾಗಿರುತ್ತದೆ.**

### ವೀಕ್ಷಿಸುವ ಸ್ಥಳಗಳು

ಟೋಕಿಯೋ ,Tokyo । ಹಾಕೋನೆ, Hakone | ನಾಗಾಯೋ, Nagayo
ಕ್ಯೋಟೋ Kyoto, । ಹಿರೋಷಿಮಾ, Hiroshima | ಒಸಾಕ, Osaka

**ವಿಶೇಷ ಸೂಚನೆಗಳು:**

- ಪ್ರವಾಸ ನಿಗಧಿಯಾಗಿರುವ ಸಮಯಕ್ಕೆ ದೇಶಗಳ ನಡುವೆ ಯಾವುದೇ ನೈಸರ್ಗಿಕ ವಿಕೋಪಗಳು/ಯುದ್ದದಂತಹ ಸಮಸ್ಯೆಗಳಿಂದ ಮಾನ್ಯ ಘನ ಸರ್ಕಾರಗಳ ಅನ್ವಯ ಪ್ರವಾಸದಲ್ಲಿ ಆಗುವ ಯಾವುದೇ ಬದಲಾವಣೆಗಳ ಷರತ್ತುಗಳಿಗೆ ಒಳಪಟ್ಟು ನೋಂದಣಿ ಮಾಡಿಕೊಳ್ಳಲಾಗುತ್ತದೆ.
- ಮಹಾಸಭೆ ಜಪಾನ್ ದೇಶದ ಪ್ರವಾಸವನ್ನು "ಟೂರ್ ಇನ್ಫಿನಿಟಿ" ಪ್ರವಾಸ ಸಂಸ್ಥೆಯ ಮೂಲಕ ಆಯೋಜಿಸಿದ್ದು, ಪ್ರವಾಸಕ್ಕೆ ಸಂಬಂಧಪಟ್ಟ ಪೂರ್ಣ ಮಾಹಿತಿಗಳನ್ನು ಪ್ರವಾಸಿಗಳು ಪಡೆದುಕೊಂಡು, ಸಮಾಧಾನ ಆದ ನಂತರವಷ್ಟೇ ಪ್ರವಾಸಕ್ಕೆ ಹೆಸರನ್ನು ನೋಂದಾಯಿಸಿ ಪಾವತಿ ಮಾಡಲು ಕೋರಿದೆ. ಸಂಪರ್ಕ ವ್ಯಕ್ತಿಯ ಹೆಸರು ಶ್ರೀ ಸಾಯಿರಾಜ್, ಕಛೇರಿ: 080-29899784 (11:00 AM to 06:00 PM)
- ಪ್ರವಾಸದಲ್ಲಿ ಮಹಾಸಭೆ ಯಾವುದೇ ಆರ್ಥಿಕ ವಹಿವಾಟುಗಳಲ್ಲಿ ಭಾಗಿಯಾಗಿರುವುದಿಲ್ಲ. ಉತ್ತಮ ಪ್ರವಾಸದ ಅನುಭವಕ್ಕೆ ಮಹಾಸಭೆ ಸಹಕರಿಸುತ್ತದೆ.

ADTV

ಮುದ್ರಕರು: ಗಿರೀಶ್ ಪ್ರಿಂಟರ್ಸ್, ನಂ.161/2, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ–ಮೇಲ್ : info@gireeshprinters.com website : www.gireeshprinters.com
ಸಂಪಾದಕರು ಮತ್ತು ಪ್ರಕಾಶಕರು: ರಾ ಪ ರವಿಶಂಕರ್ ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು–09 ಫೋನ್: 22206151/22206152